ಇಂಗ್ಲಿಷ್ ಮೂಲ: ಆರ್ಥರ್ ಕಾನನ್ ಡಾಯ್ಲ್
ಕನ್ನಡಕ್ಕೆ: ಎಚ್.ಎನ್. ರಾಮಮೂರ್ತಿ

ಕಲೆ: ಮುರಳೀಧರ ರಾಠೋಡ್

# ಮೊಹರು ಕೋಣೆಯ ಕತೆ

ನಾನೊಬ್ಬ ವಕೀಲ. ನನ್ನ ಕಚೇರಿ ಇರುವುದು ಲಂಡನ್ ನಗರದ ಅಬುಚರ್ಚ್ ಲೇನ್‌ನಲ್ಲಿ. ಅಲ್ಲಿ ಸುಮಾರು ಬೆಳಗ್ಗೆ ಹತ್ತರಿಂದ ಸಾಯಂಕಾಲ ಆರುಗಂಟೆಯವರೆಗೆ ಕೂತು ಕೆಲಸ ಮಾಡಿದಮೇಲೆ ತಾಜಾಗಾಳಿ ಸೇವಿಸಲು ಉತ್ತರ ಲಂಡನ್ ಅಂದರೆ ಹ್ಯಾಮ್ ಸ್ಟೆಡ್ ಮತ್ತು ಹೈ ಗೇಟ್ ಕಡೆ ತಿರುಗಾಡುವ ಅಭ್ಯಾಸ ನನಗಿತ್ತು. ಹೀಗೆ ಒಂದು ದಿನ ವಿಶಾಲವಾದ, ನಿರ್ಜನ ರಸ್ತೆಯಲ್ಲಿ ನಡೆಯುತ್ತಿರುವಾಗ ದೂರದಲ್ಲಿ ಕುದುರೆಗಾಡಿಯೊಂದು ವೇಗವಾಗಿ ಬರುತ್ತಿರುವುದು ಕಂಡಿತು. ಗಾಡಿ ನನ್ನ ಹತ್ತಿರ ಬಂದಾಗ ಅದಕ್ಕೆ ಸೈಕಲ್ ಮೇಲೆ ರಸ್ತೆ ದಾಟುತ್ತಿದ್ದ ಸುಮಾರು ಇಪ್ಪತ್ತು ವರ್ಷದ ತರುಣ ಡಿಕ್ಕಿ ಹೊಡೆದು ಕೆಳಗೆ ಬಿದ್ದ.

ಗಾಡಿಯ ಸಾರಥಿ ಅವನನ್ನು ಬೈದು, ನಿಲ್ಲದೇ ಹೊರಟುಹೋದ. ನಾನು ತಕ್ಷಣ ಅವನ ಸಹಾಯಕ್ಕೆ ಹೋಗಿ ಅವನನ್ನು ಎಬ್ಬಿಸಿ ಕೂರಿಸಲು ಪ್ರಯತ್ನ ಪಟ್ಟೆ. ಆದರೆ, ಅವನ ಕಾಲು ಉಳುಕಿದ್ದರಿಂದ ಏಳುವುದು ಕಷ್ಟವಾಯಿತು. ಹೇಗೋ ಅವನ ಕೈಯನ್ನು ನನ್ನ ಹೆಗಲಿನ ಮೇಲೆ ತಂದುಕೊಂಡು "ನಿನ್ನ ಮನೆ ಎಲ್ಲಿದೆ ಹೇಳು, ಅಲ್ಲಿಗೆ ಹೋಗುವುದಕ್ಕೆ ಸಹಾಯ ಮಾಡುತ್ತೇನೆ" ಅಂದೆ. ಆ ರಸ್ತೆಯಲ್ಲಿ ಶ್ರೀಮಂತರ ದೊಡ್ಡ ದೊಡ್ಡ ಮನೆಗಳಿದ್ದವು. "ನಮ್ಮ ಮನೆ ಇದೇ" ಎಂದು ಅವನು ಎದುರಿನ ಮನೆಯನ್ನು ತೋರಿದಾಗ ಆಶ್ಚರ್ಯವೇ ಆಯಿತು. ಕಬ್ಬಿಣದ ಗೇಟ್ ತೆರೆದು ಸುಮಾರು ದೂರ ನಡೆದ ಮೇಲೆ ದೊಡ್ಡ ಕಟ್ಟಡ ಕಾಣಿಸಿತು. ಮನೆಯಲ್ಲಿ ಯಾರಾದರೂ ವಾಸಿಸುತ್ತಿರುವ ಸೂಚನೆಗಳು ಕಂಡು ಬರಲಿಲ್ಲ; ಒಂದು ದೀಪವೂ ಇಲ್ಲದೆ ಮನೆ ಕತ್ತಲಲ್ಲಿ ಮುಳುಗಿತ್ತು. ಕಷ್ಟದಿಂದ ಮೆಟ್ಟಲುಗಳನ್ನು ಹತ್ತಿ ಜೇಬಿನಿಂದ ಬೀಗದಕೈ ತೆಗೆದು ಬಾಗಿಲು ತೆರೆದ. "ಅಲ್ಲಿ ನೋಡಿ ಮೇಜಿನ ಮೇಲೆ ದೀಪ ಇದೆ, ಅದರ ಪಕ್ಕದಲ್ಲಿ ಬೆಂಕಿ ಕಡ್ಡಿ ಇದೆ. ದಯವಿಟ್ಟು ದೀಪ ಹಚ್ಚಿ" ಅಂದ. ಆ ದೊಡ್ಡ ಕೋಣೆಯಲ್ಲಿ ಒಂದು ಕುರ್ಚಿ, ಸಣ್ಣ ಮೇಜು ಮತ್ತು ಸೋಫಾ ಬಿಟ್ಟರೆ ಇನ್ನೇನೂ ಬೆಳಕಿನಲ್ಲಿ ಕಾಣಲಿಲ್ಲ. ಸೋಫಾ ಮೇಲೆ ಕೂಡಿಸಿದಮೇಲೆ, "ನಿಮಗೆ ಧನ್ಯವಾದಗಳು. ನೀವಿನ್ನು ಹೊರಡಬಹುದು" ಅಂದ. ಅವನನ್ನು ಈ ಸ್ಥಿತಿಯಲ್ಲಿ ಬಿಟ್ಟು ಹೋಗುವುದು ಸರಿಯೆನ್ನಿಸಲಿಲ್ಲ. ಇಂಥ ಮನೆಗಳಲ್ಲಿ ಕೆಲವು ಸೇವಕರು